**<u>ದಿಃ 03.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದ</u>**

ದಾವೆ ದಾಖಲಿಸುವ ಪೂರ್ವದಲ್ಲಿ ನಾನು ಪ್ರತಿವಾದಿಯರಿಗೆ ನೊಟೀಸ್ ಕಳುಹಿಸಿದ್ದೆ ಎಂದರೆ ಸರಿ. ಪ್ರತಿವಾದಿಯರು ಸದರಿ ನೋಟಿಸಿಗೆ ಮರುಉತ್ತರ ನೀಡಿರುತ್ತಾರೆ ಎಂದರೆ ಸರಿ. ನನಗೆ ಮರುಉತ್ತರದ ನೋಟಿಸಿನ ಸಂಗತಿಗಳ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸರಿ. ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ಮಾತ್ರ ಮಾತುಕತೆಯಾಗಿದ್ದು 2 ಮತ್ತು 3 ನೇ ಪ್ರತಿವಾದಿಗಳ ಸಮಕ್ಷಮ ಮಾತುಕತೆಯಾಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ಸಮಕ್ಷಮವು ಸಹ ಮಾತುಕತೆ ಯಾಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಮನೆ ಇರುವ ಗಾಣದಕಟ್ಟೆಯಲ್ಲಿ ಮಾತುಕತೆಯಾಗಿರುತ್ತದೆ. ಯಾವ ದಿನಾಂಕ ಆಯಿತು ಎಂದು ನೆನಪಿಲ್ಲ. ಕರಾರು ಪತ್ರ ಆಗುವ 1 ತಿಂಗಳ ಮುಂಚೆ ಮಾತುಕತೆಯಾಗಿತ್ತು. ಆ ಸಮಯದಲ್ಲಿ ಯಾವುದೇ ಸಾಕ್ಷಿದಾರರು ಹಾಜರಿರಲಿಲ್ಲ. ಕರಾರು ಪತ್ರ ಆಗುವ 1 ತಿಂಗಳ ಮೊದಲು 1 ನೇ ಪ್ರತಿವಾದಿಯ ಮನೆಯಲ್ಲಿ ಮಾತುಕತೆಯಾಗುವಾಗ 2 ಮತ್ತು 3 ನೇ ಪ್ರತಿವಾದಿಯರು ಹಾಜರಿರಲಿಲ್ಲ ಎಂದರೆ ಸಾಕ್ಷಿಯು ಮಾತುಕತೆಯಾಗುವಾಗ 2 ಮತ್ತು 3 ನೇಪ್ರತಿವಾದಿಯರು ಒಳಗಡೆ ಇದ್ದರು ಎಂದು ನುಡಿಯುತ್ತಾರೆ. 2 ಮತ್ತು 3 ನೇ ಪ್ರತಿವಾದಿಯರ ಸಮಕ್ಷಮ ಕರಾರು ಪತ್ರದ ಮಾತುಕತೆಯಾಗಿಲ್ಲ ಎಂದರೆ ಸರಿ. ಹಣದ ಭದ್ರತೆಗಾಗಿ 2 ಮತ್ತು 3 ನೇ ಪ್ರತಿವಾದಿಗಳ ಸಹಿಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರ ಕರಾರು ಪತ್ರಕ್ಕೂ ಮತ್ತು 2 ಮತ್ತು 3 ನೇ ಪ್ರತಿವಾದಿಯರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹಿಂದಿನ ಕರಾರು ಪತ್ರ ರದ್ದು ಆದ ದಿನವೇ ನಿಪಿ.1 ಆಗಿರುತ್ತದೆ ಎಂದರೆ ಸರಿ. ಹಿಂದಿನ ಕರಾರು ಪತ್ರದಲ್ಲಿ ಇರುವ ಹಣವನ್ನು ನಿಪಿ.1 ರಲ್ಲಿ ಸೇರಿಸಿ ಸಾಲಕ್ಕೆಂದು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಹಿಂದಿನ ಕರಾರು ಪತ್ರವು ಸಹ ಜಮೀನಿನ ಕರಾರು ಪತ್ರ ಎಂದರೆ ಸರಿ. ಹಿಂದಿನ ಕರಾರು ಪತ್ರ ಆಗುವಾಗ ಜಮೀನಿನಲ್ಲಿ ಅಡಿಕೆ ತೋಟ ಇತ್ತು. ನಿಪಿ.1 ಆಗೂವಾಗಲೂ ಸಹ ಜಮೀನಿನಲ್ಲಿ ಅಡಿಕೆ ತೋಟ ಇರುತ್ತದೆ. ನಿಪಿ.1 ದಾಖಲೆಯು ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ಆದ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ನಿಪಿ.1 ಜಮೀನಿಗೆ ಸಂಬಂದಿಸಿದಂತೆ ಆದ ಕರಾರು ಪತ್ರ ಅಲ್ಲ ಎಂದರೆ ಸರಿಯಲ್ಲ. ನೋಟೀಸು ಕೊಟ್ಟು ಮರುಉತ್ತರ ಕೊಟ್ಟ ನಂತರ ಪ್ರತಿವಾದಿಯರು ಎಷ್ಟು ಹಣವನ್ನು ಮರುಪಾವತಿ ಮಾಡುತ್ತೇವೆ ಎಂದು ಕರೆ ಮೂಲಕ ಹೇಳಿದ್ದರು ಎಂದರೆ ಸರಿಯಲ್ಲ. ದಾವೆ ಹಾಕುವ ಪೂರ್ವದಲ್ಲಿ ಡಿಸೆಂಬರ್ ನಲ್ಲಿ ಅಡಿಕೆ ಬರುತ್ತದೆ ಹಣ ಮರುಪಾವತಿ ಮಾಡುತ್ತೇವೆ ಎಂದು ಪ್ರತಿವಾದಿಯರು ಹೇಳಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಬೆಂಗಳೂರಿನಲ್ಲಿ ಎಂ ಬಿ ಎ ಮಾಡುತ್ತಿದ್ದಾರೆ. 3 ನೇ ಪ್ರತಿವಾದಿ ಡೆಲ್ಲಿಯಲ್ಲಿ ಕೋಚಿಂಗ್ ಪಡೆಯುತ್ತಿದ್ದಾರೆ. 2 ಮತ್ತು 3 ನೇ ಪ್ರತಿವಾದಿಯರು ಕರಾರು ಪತ್ರ ಆಗುವ 1 ತಿಂಗಳ ಮೊದಲು ಮಾತುಕತೆ ಆಯಿತು ಎಂದು ಹೇಳಿದ ಸಮಯದಲ್ಲಿ ದಾವಣಗೆರೆ ಜಿಲ್ಲೆ,

ಚನ್ನಗಿರಿ ತಾಲ್ಲೂಕು, ಗಾಣದಕಟ್ಟೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ತಾನು ಪಡೆದ ಸಾಲಕ್ಕೆ ಬ್ಯಾಂಕ್ ಬಡ್ಡಿ ದರದಲ್ಲಿ ಹಣವನ್ನು ಮರುಪಾವತಿ ಮಾಡಲು ತಯಾರು ಇದ್ದರು ಸಹ ಬಡ್ಡಿ ಕಡಿಮೆ ಆಗುತ್ತದೆ ಎಂದು ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಲ್ಲಿಯವರೆಗೂ ನಾನು ಯಾವುದೇ ಕರಾರು ಪತ್ರದ ಆಧಾರದ ಮೇರೆಗೆ ಡಿಕ್ರಿಯನ್ನು ಪಡೆಯದೇ ಕೇವಲ ಹಣಕಾಸಿನಲ್ಲಿ ರಾಜಿ ಮಾಡಿಕೊಂಡು ಪ್ರಕರಣಗಳನ್ನು ಇತ್ಯರ್ಥ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.